**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 1175/2020

CW -3 PW -2

| | | |
|---|---|---|
| ಹೆಸರು | ಃ | ಲೋಕೇಶ್ |
| ತಂದೆಯ ಹೆಸರು | ಃ | ಕೆಂಪೇಗೌಡ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಚೆಲ್ಲಿಪುರದೊಡ್ಡಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 16.09.2022

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿಲ್ಲ. ಚಾಸಾ-1 ಗೊತ್ತು. ಚಾಸಾ-2, 4 ರಿಂದ 6 ರವರು ಗೊತ್ತಿಲ್ಲ.

ಸಾಕ್ಷಿಗೆ ನಿಪಿ-1 ನ್ನು ತೋರಿಸಿದ್ದು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳ ಮೇಲಿರುವ ಚೀಟಿಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ31.03.2020 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ಕೋಡಿಹಳ್ಳಿ ಬಾಬುರಾವ್ ಸರ್ಕಲ್ ಬಳಿ ಮಾತನಾಡಿಕೊಂಡು ನಿಂತಿದ್ದಾಗ ಚಾಸಾ-1 ರವರು ನಮ್ಮನ್ನು ಕರೆದು ಈಗ ತಾನೇ ಯಾರೋ ಒಬ್ಬ ಉಯ್ಯಂಬಳ್ಳಿ ಹೋಬಳಿ ತಗಡೆಗೌಡನದೊಡ್ಡಿ ಗ್ರಾಮದಲ್ಲಿ ಅಂಗಡಿ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆಂದು, ಸದರಿ ಅಂಗಡಿಯ ಮೇಲೆ ದಾಳಿ ಮಾಡಬೇಕಾಗಿದೆ, ದಾಳಿ ಕಾಲದಲ್ಲಿ ಪಂಚರಾಗುವಂತೆ ನನಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಠಾಣಾ ಸಿಬ್ಬಂದಿ ಹಾಗೂ

ನಾವು ತಗಡೇಗೌಡನದೊಡ್ಡಿ ಗ್ರಾಮದಲ್ಲಿ ಅಂಗಡಿಯ ಮನೆಗೆ ಹೋದಾಗ ಅಂಗಡಿ ಮನೆಯಲ್ಲಿ ಒಬ್ಬ ಮದ್ಯವನ್ನು ಮಾರಾಟ ಮಾಡುತ್ತಿದ್ದು, ಪೋಲೀಸರು ಅವನನ್ನು ಹಿಡಿದುಕೊಂಡರು ನಂತರ ಆತನ ಹೆಸರು ವಿಳಾಸ ಗ್ರಾಮಸ್ಥರಲ್ಲಿ ಕೇಳಲಾಗಿ ಕೃಷ್ಣ ಬಿನ್ ಲಿಂಗೇಗೌಡ, ಚಿಲ್ಲರೆ ಅಂಗಡಿ ವ್ಯಾಪಾರಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಅಂಗಡಿಯನ್ನು ಶೋಧನೆ ಮಾಡಲಾಗಿ ಸುಮಾರು 90 ಎಂಎಲ್ ನ 84 ಹೈವಾರ್ಡ ಚಿಯರ್ ವಿಸ್ಕಿ ಹಾಗೂ 180 ಎಂಎಲ್ ನ 43 ಬ್ಲಾಕ್ ಪೈಪರ್ ಸಾಜೆಡ್ ಕಂಡು ಬಂದವು ಎಂದರೆ ಸರಿಯಲ್ಲ. ನಂತರ ನನ್ನ ಸಮಕ್ಷಮದಲ್ಲಿ ಅವುಗಳನ್ನು ವಶಪಡಿಸಿಕೊಂಡು ಅವುಗಳ ಪೈಕಿ 180 ಎಂಎಲ್ ನ ಒಂದು ಬೆಂಗಳೂರ್ ವಿಸ್ಕಿ ಸ್ಯಾಜೆಡ್ ಹಾಗೂ 180 ಎಂಎಲ್ ನ ಒಂದು ಬ್ಲಾಕ್ ಪೈಪರ್ ನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಒಂದು ಬಿಳಿ ಬಣ್ಣದ ಚೀಲಕ್ಕೆ ಹಾಕಿ ಅದನ್ನು ದಾರದಿಂದ ಕಟ್ಟಿ ಸೀಲ್ ಹಾಕಿ ನಂತರ ಅಮಾನತು ಪಡಿಸಿಕೊಂಡ ಮದ್ಯವನ್ನು ಮತ್ತು ಆರೋಪಿಯನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಬರೆದ ಅಮಾನತು ಪಂಚನಾಮೆಗೆ ನಾನು ಸಹಿ ಹಾಕಿದೆ ಎಂದರೆ ಸರಿಯಲ್ಲ.  ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ವಕೀಲರಿಂದಃ**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ

**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 1175/2020

CW -2 PW - 1

| | | |
|---|---|---|
| ಹೆಸರು | ಃ | ಕರಿಯಪ್ಪ |
| ತಂದೆಯ ಹೆಸರು | ಃ | ತಿಮ್ಮಯ್ಯ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಅರೆಮೇಗಳದೊಡ್ಡಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 16.09.2022

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿಲ್ಲ. ಚಾಸಾ-1 ಗೊತ್ತಿಲ್ಲ. ಚಾಸಾ-3 ರಿಂದ 6 ರವರು ಗೊತ್ತಿಲ್ಲ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳ ಮೇಲಿರುವ ಚೀಟಿಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ಅನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ31.03.2020 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-3 ರವರು ಕೋಡಿಹಳ್ಳಿ ಬಾಬುರಾವ್ ಸರ್ಕಲ್ ಬಳಿ ಮಾತನಾಡಿಕೊಂಡು ನಿಂತಿದ್ದಾಗ ಚಾಸಾ-1 ರವರು ನಮ್ಮನ್ನು ಕರೆದು ಈಗ ತಾನೇ ಯಾರೋ ಒಬ್ಬ ಉಯ್ಯಂಬಳ್ಳಿ ಹೋಬಳಿ ತಗಡೆಗೌಡನದೊಡ್ಡಿ ಗ್ರಾಮದಲ್ಲಿ ಅಂಗಡಿ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆಂದು, ಸದರಿ ಅಂಗಡಿಯ ಮೇಲೆ ದಾಳಿ ಮಾಡಬೇಕಾಗಿದೆ, ದಾಳಿ ಕಾಲದಲ್ಲಿ

ಪಂಚರಾಗುವಂತೆ ನನಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಠಾಣಾ ಸಿಬ್ಬಂದಿ ಹಾಗೂ ನಾವು ತಗಡೇಗೌಡನದೊಡ್ಡಿ ಗ್ರಾಮದಲ್ಲಿ ಅಂಗಡಿಯ ಮನೆಗೆ ಹೋದಾಗ ಅಂಗಡಿ ಮನೆಯಲ್ಲಿ ಒಬ್ಬ ಮದ್ಯವನ್ನು ಮಾರಾಟ ಮಾಡುತ್ತಿದ್ದು, ಪೋಲೀಸರು ಅವನನ್ನು ಹಿಡಿದುಕೊಂಡರು ನಂತರ ಆತನ ಹೆಸರು ವಿಳಾಸ ಗ್ರಾಮಸ್ಥರಲ್ಲಿ ಕೇಳಲಾಗಿ ಕೃಷ್ಣ ಬಿನ್ ಲಿಂಗೇಗೌಡ, ಚಿಲ್ಲರೆ ಅಂಗಡಿ ವ್ಯಾಪಾರಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಅಂಗಡಿಯನ್ನು ಶೋಧನೆ ಮಾಡಲಾಗಿ ಸುಮಾರು 90 ಎಂಎಲ್ ನ 84 ಹೈವಾರ್ಡ್ಸ ಚಿಯರ್ ವಿಸ್ಕಿ ಹಾಗೂ 180 ಎಂಎಲ್ ನ 43 ಬ್ಲಾಕ್ ಪೈಪರ್ ಸಾಚೆಡ್ ಕಂಡು ಬಂದವು ಎಂದರೆ ಸರಿಯಲ್ಲ. ನಂತರ ನನ್ನ ಸಮಕ್ಷಮದಲ್ಲಿ ಅವುಗಳನ್ನು ವಶಪಡಿಸಿಕೊಂಡು ಅವುಗಳ ಪೈಕಿ 180 ಎಂಎಲ್ ನ ಒಂದು ಬೆಂಗಳೂರ್ ವಿಸ್ಕಿ ಸ್ಯಾಚೆಡ್ ಹಾಗೂ 180 ಎಂಎಲ್ ನ ಒಂದು ಬ್ಲಾಕ್ ಪೈಪರ್ ನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಒಂದು ಬಿಳಿ ಬಣ್ಣದ ಚೀಲಕ್ಕೆ ಹಾಕಿ ಅದನ್ನು ದಾರದಿಂದ ಕಟ್ಟಿ ಸೀಲ್ ಹಾಕಿ ನಂತರ ಅಮಾನತು ಪಡಿಸಿಕೊಂಡ ಮದ್ಯವನ್ನು ಮತ್ತು ಆರೋಪಿಯನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಬರೆದ ಅಮಾನತು ಪಂಚನಾಮೆಗೆ ನಾನು ಸಹಿ ಹಾಕಿದೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ವಕೀಲರಿಂದಃ**

ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ